ಪರಿಸ್ಥಿತಿಯನ್ನು ನೋಡಿಕೊಂಡು, ಒಂದೊಂದು ಸ್ಟ್ಯಾಂಡ್ ಬೈ ಮೋಟಾರ್ ಇಡಬೇಕೆಂಬುದು ಸರ್ಕಾರದ ಪಾಲಿಸಿಯಾಗಿದೆ.

**ಶ್ರೀ ಕೆ. ಚೆನ್ನಬಸವನ ಗೌಡ** — ಮೋಟಾರ್ ಸುಟ್ಟು ಹೋದರೆ, ರಿಪೇರಿ ಮಾಡುವುದಕ್ಕೆ ಮೆಕ್ಯಾನಿಕ್ ಇಲ್ಲ, ಚಿತ್ರದುರ್ಗ ಬಳ್ಳಾರಿ ಜಿಲ್ಲೆಗಳಿಗೆ ಸೇರಿ ಒಬ್ಬ ಮೆಕ್ಯಾನಿಕ್ಕನ್ನು ಇಟ್ಟಿದಾರೆ. ಅವರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಿ ರಿಪೇರಿ ಮಾಡುವುದಕ್ಕೆ ಹತ್ತಾರು ದಿವಸಗಳು ಬೇಕಾಗುತ್ತದೆ, ಆದುದರಿಂದ ಬಳ್ಳಾರಿ ಜಿಲ್ಲೆಗೆ ಒಬ್ಬ ಮೆಕ್ಯಾನಿಕನನ್ನು ನೇಮಕ ಮಾಡುತ್ತೀರಾ ?

**ವಿಷಯ : ರಾಷ್ಟ್ರೀಯ ಹೆದ್ದಾರಿ ಮತ್ತು ಪ್ರಾಂತೀಯ ಹೆದ್ದಾರಿಗಳ ಪಕ್ಕದಲ್ಲಿರುವ ಸಾಲು ಮರಗಳ ಸಂರಕ್ಷಣೆಯ ಬಗ್ಗೆ.**

**ಪ್ರಶ್ನೆ : 190(688) ಶ್ರೀ ಜಿ ವಿ. ಮಂಟೂರ್** (ಬಾಗಲಕೋಟೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಷ್ಟ್ರೀಯ ಹೆದ್ದಾರಿ ಮತ್ತು ಪ್ರಾಂತೀಯ ಹೆದ್ದಾರಿಗಳ ಪಕ್ಕಕ್ಕೆ ಇರುವ ಗಿಡಗಳ ಸಂರಕ್ಷಣೆಯು ಯಾವ ಖಾತೆಗೆ ಸಂಬಂಧಿಸಿದ್ದು ;

ಆ) ಇಂತಹ ಗಿಡಗಳು ಪ್ರತಿನಿತ್ಯ ನಾಶವಾಗುತ್ತಿದ್ದು ಅರಣ್ಯ ಇಲಾಖೆಯವರು ಎಷ್ಟು ಮೊಕದ್ದಮೆಗಳನ್ನು ದಾಖಲು ಮಾಡಿ ಕ್ರಮ ಕೈಗೊಂಡಿದ್ದಾರೆ ;

ಇ) 1981–82, 1982–83 ಮತ್ತು 1984ನೇ ಸಾಲುಗಳಲ್ಲಿ ಹೆದ್ದಾರಿವಾರು ನೆಟ್ಟಿರುವ ಗಿಡಗಳ ಸಂಖ್ಯೆ ಎಷ್ಟು ? ಹಾಗೂ ಈ ಬಗ್ಗೆ ಖರ್ಚು ಮಾಡಿರುವ ಹಣ ಎಷ್ಟು ?

**ಉತ್ತರ : ಶ್ರೀ ಬಿ. ಎ. ಜೀವಿಜಯ** (ಅರಣ್ಯ ರಾಜ್ಯ ಮಂತ್ರಿ ಗಳು).—

ಅ) ಕಾವಲುಗಾರಿ ಮತ್ತು ಅರಣ್ಯ ಇಲಾಖೆಗಳಿಗೆ ಸೇರಿದ್ದು.

ಆ) ಮೊಕದ್ದಮೆಗಳನ್ನು ದಾಖಲು ಮಾಡಿರುವುದಿಲ್ಲ.

ಇ) ನೆಟ್ಟ ಸಸಿಗಳ ವಿವರ ಹಾಗೂ ವೆಚ್ಚ ಈ ಕೆಳಗಿನಂತೆ ಇದೆ :

| ವರ್ಷ | ಸಸಿಯ ಸಂಖ್ಯೆ | ವೆಚ್ಚ ರೂಪಾಯಿ |
|---|---|---|
| 1981—82 | 24,000 | 250,000—00 |
| 1982—83 | 28,000 | 350,000—00 |
| 1983—84 | 90 000 | 1200,000—00 |

**ಶ್ರೀ ಜಿ ವಿ. ಮಂಟೂರ್.**— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರತಕ್ಕ ರಾಷ್ಟ್ರೀಯ ಹೆದ್ದಾರಿಗಳು ಮತ್ತು ಪ್ರಾಂತೀಯ ಹೆದ್ದಾರಿಗಳ ಪಕ್ಕದಲ್ಲಿ ಬೆಳಸಲಾಗುವ ಗಿಡಮರಗಳ ಸಂರಕ್ಷಣೆಯನ್ನು 11 ಜಿಲ್ಲೆಗಳಲ್ಲಿ ಅರಣ್ಯ ಇಲಾಖೆಯವರು, 8 ಜಿಲ್ಲೆಗಳಲ್ಲಿ ಲೋಕೋಪಯೋಗಿ ಇಲಾಖೆಯವರು ನೋಡಿಕೊಳ್ಳುತ್ತಿದ್ದಾರೆ. ಈ ತಾರತಮ್ಯ ಏತಕ್ಕೆಂದು ನಾನು ಕೇಳುತ್ತೇನೆ.

**ಶ್ರೀ ಬಿ ಎ. ಜೀವಿಜಯ** —ಇದುವರೆವಿಗೂ 2 ಇಲಾಖೆಗಳು ನೋಡಿಕೊಂಡು ಹೋಗುತ್ತಿವೆ.

**ಶ್ರೀ ಜಿ. ವಿ. ಮಂಟೂರ್.**— ಈ ತಾರತಮ್ಯ ಏತಕ್ಕೆಂದು ಕೇಳುತ್ತಿದ್ದೇನೆ

**ಶ್ರೀ ಹೆಚ್. ಡಿ. ದೇವೇಗೌಡ** — ರಾಷ್ಟ್ರೀಯ ಮತ್ತು ಪ್ರಾಂತೀಯ ಹೆದ್ದಾರಿಗಳ ಪಕ್ಕದಲ್ಲಿ ಬೆಳೆಸಲಾಗುವ ಮರಗಿಡಗಳ ಸಂಪೂರ್ಣ ಹೊಣೆಯನ್ನು ಅರಣ್ಯ ಇಲಾಖೆಗೆ ವಹಿಸಿಕೊಡುವ ಬಗ್ಗೆ, ಸರ್ಕಾರ ಅತ್ಯಂತ ಶೀಘ್ರವಾಗಿ ನಿರ್ಣಯ ಮಾಡುತ್ತದೆ.

**ಶ್ರೀ ಅಪ್ಪಾಸ್ವಾಮಿ ರೆಡ್ಡಿ.**— ರಸ್ತೆಗಳ ಪಕ್ಕದಲ್ಲಿರುವ ಸಾಲು ಮರಗಳ ಸಂರಕ್ಷಣೆಯ ಹೊಣೆಯನ್ನು ರೈತರಿಗೆ ಕೊಡುವುದಕ್ಕೆ ಇರತಕ್ಕ ಆಭ್ಯಂತರ ಏನು ?

**ಶ್ರೀ ಬಿ ಎ. ಜೀವಿಜಯ** — ಆಭ್ಯಂತರ ಏನೂ ಇಲ್ಲ, ಇದರ ಬಗ್ಗೆ ಸರ್ಕಾರ ಕೂಡಲೇ ನಿರ್ಧಾರ ತೆಗೆದುಕೊಳ್ಳುತ್ತದೆ.

**ಶ್ರೀ ಸಿ. ಭೈರೇಗೌಡ.**— ಸ್ವಾಮಿ, ಅರಣ್ಯ ಇಲಾಖೆಯವರು ಬೇಸಿಗೆ ಕಾಲದಲ್ಲಿ ನಾಟಿ ಮಾಡುತ್ತಿದ್ದಾರೆ. ಮಳೆಗಾಲದಲ್ಲಿ ಸಸಿ ನಾಟಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ? ಮರಗಿಡಗಳ ಸಂರಕ್ಷಣೆಯ ಹೊಣೆಯನ್ನು ಪಕ್ಕದಲ್ಲಿರತಕ್ಕ ಸಣ್ಣ ಹಿಡುವಳಿದಾರರಿಗೆ ಕೊಡುವಂಥ ವ್ಯವಸ್ಥೆ ಮಾಡುತ್ತೀರಾ ?

**ಶ್ರೀ ಬಿ. ಎ. ಜೀವಿಜಯ.**— ಮಾನ್ಯ ಅಧ್ಯಕ್ಷರೇ, ಪಕ್ಕದಲ್ಲಿರುವ ಜಮೀನು ಮಾಲೀಕರಿಗೆ ಪಟ್ಟಿ ಕೊಡತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ. ತಮಗೆ ಗೊತ್ತಿರುವ ಹಾಗೆ ಒಂದು ಅಥವಾ ಎರೆಡು ಕಿಲೋ ಮೀಟರ್‌ಗೆ ಒಬ್ಬನಂತೆ ವಾಚ್‌ಮ್ಯಾನ್ ಇಟ್ಟುಕೊಂಡು ಸಸಿಗಳನ್ನು ನಾಟಿ ಮಾಡಿಸಿ, ಅವುಗಳಿಗೆ ನೀರು ಹಾಕಿಸುವಂಥ ವ್ಯವಸ್ಥೆ ಮಾಡಿದ್ದೇವೆ.

**ಶ್ರೀ ಹೆಚ್. ಜಿ. ಚೆನ್ನಪ್ಪ.**— ಹೆದ್ದಾರಿಗಳ ಪಕ್ಕದಲ್ಲಿ ಮರಗಿಡಗಳನ್ನು ಬೆಳೆಸುವಂಥ ಕಾರ್ಯ

ಕ್ರಮವನ್ನು ಕೆಲವು ಕಡೆ ಮಾತ್ರ ಮಾಡುತ್ತಿದ್ದಾರೆ, ಎಲ್ಲಾ ಕಡೆ ಈ ಕಾರ್ಯಕ್ರಮವನ್ನು ಜಾರಿ ಮಾಡುತ್ತೀರಾ ?

**ಶ್ರೀ ಬಿ. ಎ. ಜೀವಿಜಯ.**— ಮಾನ್ಯ ಅಧ್ಯಕ್ಷರೇ, ಮೂರು ವರ್ಷದ ಒಂದು ಯೋಜನೆಯನ್ನು ಹಾಕಿಕೊಂಡು ಹಂತ ಹಂತವಾಗಿ ರಾಜ್ಯದಲ್ಲಿರುವ ಎಲ್ಲಾ ಹೆದ್ದಾರಿಗಳಲ್ಲಿಯೂ ಮರಗಿಡಗಳನ್ನು ಬೆಳೆಸುವಂಥ ಯೋಜನೆ ಹಾಕಿಕೊಂಡಿದ್ದೇವೆ.

**ವಿಷಯ : ಬೆಂಗಳೂರು ನೀಲಗಿರಿ ರಸ್ತೆಯಲ್ಲಿ ನಂಜನಗೂಡು ಬಳಿಯಲ್ಲಿನ ವೃತ್ತವನ್ನು ವಿಸ್ತಾರಗೊಳಿಸುವುದು ಕುರಿತು**

**ಪ್ರಶ್ನೆ : 192(718) ಶ್ರೀ ಎಂ. ಮಹದೇವ್** (ನಂಜನಗೂಡು).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು—ನೀಲಗಿರಿ ರಸ್ತೆಯ ಮೇಲೆ ನಂಜನಗೂಡಿನ ಹತ್ತಿರ ವಿಶ್ವೇಶ್ವರಯ್ಯ ವೃತ್ತದ ಬಳಿ, ಆಗಾಗ್ಗೆ ಸಂಭವಿಸುವ ಅಪಘಾತಗಳನ್ನು ತಪ್ಪಿಸುವ ಸಲುವಾಗಿ ಈ ವೃತ್ತವನ್ನು ಅತಿ ಶೀಘ್ರದಲ್ಲಿ ವಿಸ್ತರಿಸುವ ಅವಶ್ಯಕತೆ ಇರುವುದು ನಿಜವಲ್ಲವೇ ;

ಆ) ಹಾಗಿದ್ದಲ್ಲಿ ಈ ವಿಷಯಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

**ಉತ್ತರ : ಶ್ರೀ ಹೆಚ್. ಡಿ. ದೇವೇಗೌಡ**(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ಈ ಕಾಮಗಾರಿಯನ್ನು ತೆಗೆದುಕೊಂಡು ಅತಿ ಶೀಘ್ರದಲ್ಲಿ ಮುಗಿಸುವ ಪ್ರಸ್ತಾವನೆ ಇದೆ.

**ಶ್ರೀ ಎಂ. ಮಹದೇವ್.**— ಈ ಒಂದು ಕೆಲಸವನ್ನು ಮುಗಿಸುವ ದಿಸೆಯಲ್ಲಿ ಕಾಲಮಿತಿಯನ್ನು ನಿರ್ಧಾರ ಮಾಡುವುದಕ್ಕೆ ಸಾಧ್ಯವೇ ? ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ ವೃತ್ತವನ್ನು ದೊಡ್ಡವುಗಳನ್ನಾಗಿ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

**ಶ್ರೀ ಹೆಚ್. ಡಿ. ದೇವೇಗೌಡ.**— ಈ ವೃತ್ತದ ಕೆಲಸ ಮುಗಿಸಿ, ನಂತರ ಎಲ್ಲಾ ವೃತ್ತಗಳ ಬಗ್ಗೆ ಯೋಜನೆ ಮಾಡೋಣ.

**ವಿಷಯ : ಕ್ರೋಂ ಟ್ಯಾನಿಂಗ್ ಕಂಪನಿಯ ವಿಚಾರ**

**ಪ್ರಶ್ನೆ : 194(566) ಶ್ರೀ ಎ. ಮುನಿಯಪ್ಪ** ( ಚಿಕ್ಕಬಳ್ಳಾಪುರ ).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಕ್ರೋಂ ಟ್ಯಾನಿಂಗ್ ನಿಯಮಗಳು ಇವೆ (ಜಿಲ್ಲಾವಾರು ವಿವರಗಳನ್ನೊದಗಿಸುವುದು).

ಆ) ಮೈಸೂರು ರಸ್ತೆಯಲ್ಲಿರುವ ಕ್ರೋಂ ಟ್ಯಾನಿಂಗ್ ಕಂಪನಿಯನ್ನು ಯಾವಾಗ ಸ್ಥಾಪಿಸಲಾಯಿತು

ಇ) ಸದರಿ ಕಂಪನಿಯಲ್ಲಿ ಚರ್ಮ ಹದ ಮಾಡುವ ಮತ್ತು ಚರ್ಮ ಕೆಲಸ ಮಾಡುತ್ತಿರುವವರ ನಿಮ್ನ ವರ್ಗಕ್ಕೆ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿದ ಕಾರ್ಮಿಕರ ಸಂಖ್ಯೆ ಎಷ್ಟು ;

ಈ) ಸದರಿ ಕಂಪನಿಯ ಸ್ವಾಧೀನದಲ್ಲಿರುವ ಜಮೀನಿನ ವಿಸ್ತೀರ್ಣವೆಷ್ಟು ಮತ್ತು ಇತರೆ ಸಾಮಾನುಗಳ ಮೌಲ್ಯವೆಷ್ಟು ;

ಉ) ಈ ಕಂಪನಿಯು ಎಂ. ಎಸ್. ಐ. ಎಲ್‌ಗೆ ವಹಿಸಿ ಕೊಡಬಾರದೆಂದು 19 ಶಾಸಕರು ಮುಖ್ಯ ಮಂತ್ರಿಗಳಿಗೆ ಒಂದು ಮನವಿಯನ್ನು ಕೊಟ್ಟಿದ್ದರೂ ಕೂಡ ಸದರಿ ಕಂಪನಿಯನ್ನು ಎಂ.ಎಸ್.ಐ.ಎಲ್. ಕಂಪನಿಗೆವಹಿಸಿ ಕೊಟ್ಟಿರುವುದು ನಿಜವೇ ?

**ಉತ್ತರ : ಶ್ರೀ ಎಸ್ ಆರ್. ಬೊಮ್ಮಾಯಿ.**— (ಕೈಗಾರಿಕಾ ಮಂತ್ರಿಗಳು).—

ಅ) ಕರ್ನಾಟಕದಲ್ಲಿ ಸರ್ಕಾರಿ ಸೌಮ್ಯದಲ್ಲಿ ಒಂದೇ ಒಂದು ಟ್ಯಾನಿಂಗ್ ಕಂಪನಿಯು ಇದೆ. ಅದು ದಿ ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿ ನಿಯಮಿತ ಬೆಂಗಳೂರಿನ ಮೈಸೂರು ರಸ್ತೆಯಲ್ಲಿದೆ.

ಆ) ಈ ಕಂಪನಿಯನ್ನು 1908ರಲ್ಲಿ ಸ್ಥಾಪಿಸಲಾಯಿತು.

ಇ) ಕೆಲಸಗಾರರ ಸಂಖ್ಯೆ

| | |
|---|---|
| ಪರಿಶಿಷ್ಟ ಜಾತಿಗಳು | 104 |
| ಪರಿಶಿಷ್ಟ ಬುಡಕಟ್ಟು | 18 |
| ಒಟ್ಟು | 122 |

ಈ) ಕಂಪನಿ ಜಮೀನಿನ ವಿಸ್ತೀರ್ಣ— 11ಎಕರೆ 31 ಗುಂಟೆಗಳು. ಇತರ ಸಾಮಾನುಗಳ ಮೌಲ್ಯ— 64.83 ಲಕ್ಷ ರೂ.ಗಳು (ಲೆಕ್ಕಪುಸ್ತಕಗಳ ಆಧಾರದ ಮೇರೆಗೆ).

ಉ) 1. ಸರ್ಕಾರವು ದಿ ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿಯನ್ನು ಮೈಸೂರು ಸೇಲ್ಸ್